OS. No. 154/2023
DW-1

ದಿನಾಂಕಃ 11-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು ಃ ವಾದಿ ಪರ ಶ್ರೀ.ಜಿ.ಎಸ್.ಬಿ ವಕೀಲರಿಂದ ಃ**

1. ನಾನು 10 ನೇ ತರಗತಿ ವಿಧ್ಯಾಭಾಸ ಮಾಡಿದ್ದೇನೆ. ನಾನು ಒಕ್ಕಲುತನ ಮಾಡುತ್ತೇನೆ. ನಾನು ಸಲ್ಲಿಸಿರುವ ತಕರಾರಿಗೆ ನಾನೇ ಮಾಹಿತಿ ನೀಡಿದ್ದೇನೆ. ನನ್ನ ಮುಖ್ಯ ವಿಚಾರಣೆ ತಯಾರಿಸಲು ಯಾರು ಮಾಹಿತಿ ನೀಡಿದರು ಗೊತ್ತಿಲ್ಲ. ದಾವಾ ಆಸ್ತಿಗಳಲ್ಲಿ ವಾದಿಗಳು ಮತ್ತು 3 ನೇ ಪ್ರತಿವಾದಿ ಪಾಲು ಕೇಳಿದ್ದಾರೆ. ಸದರಿ ಮೂರು ಜನ ನನ್ನ ತಂಗಿಯಂದಿರು. ಮೃತ ಪರಪ್ಪ ನನ್ನ ಅಜ್ಜ. ಪರಪ್ಪ ಮತ್ತು ಗುರುಪಾದಪ್ಪ ಅಣ್ಣ-ತಮ್ಮ. ಪರಪ್ಪರವರಿಗೆ 4 ಜನ ಮಕ್ಕಳು. ಅದರಲ್ಲಿ ಬಸಪ್ಪ ದತ್ತಕ ಹೋಗಿದ್ದರು. ಇನ್ನೂಳಿದವರು ಎಂದರೆ ಅವರ ಹೆಸರುಗಳು, ರಾಮಗೊಂಡ ಮಲಗೊಂಡ ಮತ್ತು ಭೀಮಗೊಂಡ. ನನ್ನ ದೊಡ್ಡಣ್ಣ ಬಸಪ್ಪ ಗುರುಪಾದಪ್ಪರವರಿಗೆ ದತ್ತಕ ಹೋದರು.

2. ನನ್ನ ತಂದೆ ರಾಮಗೊಂಡ. ಸದರಿ ರಾಮಗೊಂಡರವರಿಗೆ ನಾವು 4 ಜನ ಹೆಣ್ಣು ಮಕ್ಕಳು ಅವರ ಹೆಸರು ಬಂಗಾರೆವ್ವ, ಸುವರ್ಣ, ಸುಮಿತ್ರಾ, ಭಾಗೀರಥಿ ಮತ್ತು ನಾನು. ನಾನೇ ದೊಡ್ಡವನು. ನನಗೆ ಮೂರು ಜನ ಗಂಡು ಮಕ್ಕಳು ಒಬ್ಬಳು ಹೆಣ್ಣು ಮಗಳು.

(ಈ ಹಂತದಲ್ಲಿ ವಾದಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗಾಗಿ ಕಾಲವಕಾಶ ಕೋರುತ್ತಾರೆ, ಕಾಲವಾಶ ನೀಡಿ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-
ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ